**IHADA PARIMALA [ KADA HADIYA HOOGALU] :**
Collection of Articles, Edited by :

**Chief Editor**
**Dr. Purushothama D.**

**Editor**
**Dr. Chandrashekara P**
**Pro. Kru.Pa.Ganesha**
**Basavaraju C. Jettihundi**

Published by :
**Mani Prakashana**
# 560, 12th Main, 20 'B' Cross,
'C' Block, Vijayanagar 3rd Stage,
Mysore-570 030.
Mob : 96865 35465
Email : Maniprakashana@gmail.com

**ISBN : 978-93-84240-54-7**

ಪ್ರಥಮ ಮುದ್ರಣ : 2019
ಪುಟಗಳು : 264
ಹಕ್ಕು : ಲೇಖಕರು
ಬೆಲೆ : ರೂ. 275/-
ಪುಸ್ತಕದ ಅಳತೆ : 1/8 ಡೆಮ್ಮಿ
ಕಾಗದ : 70 ಜಿ.ಎಸ್.ಎಂ.
ಮುಖಪುಟ : ಅರುಣ್‌ಕುಮಾರ್ ಜಿ.
ಡಿ.ಟಿ.ಪಿ. : ಉಮೇಶ್.
ಮುದ್ರಕರು : ಶಾರ್ಪ್ ಎಂಟರ್‌ಪ್ರೈಸೆಸ್, ಮೈಸೂರು.

**IHADA PARIMALA [ KADA HADIYA HOOGALU] :**
Collection of Articles, Edited by :
**Chief Editor**
**Dr. Purushothama D.**

**Editor**
**Dr. Chandrashekara P**
**Pro. Kru.Pa.Ganesha**
**Basavaraju C. Jettihundi**

Published by :
**Mani Prakashana**
# 560, 12th Main, 20 'B' Cross,
'C' Block, Vijayanagar 3rd Stage,
Mysore-570 030.
Mob : 96865 35465
Email : Maniprakashana@gmail.com

**ISBN : 978-93-84240-54-7**

ಪ್ರಥಮ ಮುದ್ರಣ : 2019

ಪುಟಗಳು : 264

ಹಕ್ಕು : ಲೇಖಕರು

ಬೆಲೆ : ರೂ. 275/-

ಪುಸ್ತಕದ ಅಳತೆ : 1/8 ಡೆಮ್ಮಿ

ಕಾಗದ : 70 ಜಿ.ಎಸ್.ಎಂ.

ಮುಖಪುಟ : ಅರುಣ್‌ಕುಮಾರ್ ಜಿ.

ಡಿ.ಟಿ.ಪಿ. : ಉಮೇಶ್.

ಮುದ್ರಕರು : ಶಾರ್ಪ್ ಎಂಟರ್‌ಪ್ರೈಸೆಸ್, ಮೈಸೂರು.

# ಪರಿವಿಡಿ

* ಮಹಾಸಾಗರದ ಮುತ್ತುಗಳು
ಡಾ. ಮಾದಯ್ಯ ಮಾಕನಹಳ್ಳಿ

* ಕನಕದಾಸರ ಪ್ರಸ್ತುತತೆಯ ಹುಡುಕಾಟ
ಡಾ. ಎಸ್. ನರೇಂದ್ರಕುಮಾರ್

* ದಲಿತ ಸಂವೇದನೆಯ ಸಾಂಸ್ಕೃತಿಕ ಸಂಕಥನ
ಡಾ. ಅಪ್ಪಗೆರೆ ಸೋಮಶೇಖರ್

* ಪ್ರೊ. ಕಾಳೇಗೌಡ ನಾಗವಾರ ಅವರ ಕಾಡು ಮತ್ತು ಕೂಡಿಕೆ ಕಥೆಗಳ ಅಧ್ಯಯನ
ಡಾ. ಎಂ.ಬಿ. ಸುರೇಶ

* ಎಂ.ರಾಮಕೃಷ್ಣ ಅವರ ಜೀವನ ಮತ್ತು ಸಾಧನೆ
ಡಾ.ಎನ್.ವೈ. ಶ್ರೀನಿವಾಸಯ್ಯ

* ಬೂಸಾ ಚಳವಳ: ಒಂದು ಒಳನೋಟ
ಡಾ. ಚಂದ್ರಶೇಖರ ಪಿ.

* ಇಮ್ಮಡಿ ಮುರಿಗಾ ಗುರುಸಿದ್ಧ ಸ್ವಾಮಿಗಳ ಸಾಹಿತ್ಯ ಮತ್ತು ಅಭಿವ್ಯಕ್ತಿ
ಡಾ. ಸಿ.ಟಿ. ಜಯಣ್ಣ

* ಕುವೆಂಪು ಅವರ ನಾಟಕಗಳಲ್ಲಿ ಕಂಡುಬರುವ ಶೋಷಿತ ನಾಯಕ ಪಾತ್ರಗಳ ವಿಶ್ಲೇಷಣೆ
ಬಸವರಾಜು ಸಿ. ಜೆಟ್ಟಿಹುಂಡಿ

* ಕರ್ನಾಟಕದಲ್ಲಿ ಕ್ಯಾತಪ್ಪನ ಆರಾಧನಾ ನೆಲೆಗಳು
ಪ್ರೊ. ಜಗನ್ನಾಥ. ಎನ್

* ಬುಡಕಟ್ಟು ಸಮುದಾಯದ ಜಾತ್ರೆಯ ವರ್ತಮಾನದ ತಲ್ಲಣಗಳು
ಡಾ. ಚಿತ್ರಯ್ಯ. ಕೆ

* ಅಬಚೂರಿನ ಪೋಸ್ಟಾಫೀಸು : ಮಹಿಳಾ ನೆಲೆಗಳು
ಡಾ.ಎಂ.ವೈ. ಶಿವರಾಮು

* ಕೃಷಿ ಚರಗದ ಫಲವಂತಿಕೆ ಆಚರಣೆಗಳು

# ಇಮ್ಮಡಿ ಮುರಿಗಾ ಗುರುಸಿದ್ಧ ಸ್ವಾಮಿಗಳ ಸಾಹಿತ್ಯ ಮತ್ತು ಅಭಿವ್ಯಕ್ತಿ

– ಡಾ. ಸಿ. ಟಿ. ಜಯಣ್ಣ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಷಡಕ್ಷರಿಯಾದ ಮೇಲೆ ಚಂಪೂವನ್ನು ಕಾವ್ಯಕ್ಕೆ ಸಮರ್ಥ ಮಾಧ್ಯಮವನ್ನಾಗಿ ಬಳಸಿ ಅದರ ಸಮಸ್ತ ಕಸುವನ್ನು ತನ್ನ ದೈವದತ್ತ ಪ್ರತಿಭೆಯಿಂದ ದುಡಿಸಿಕೊಂಡವರು ಕನ್ನಡದ ಸುಪ್ರಸಿದ್ಧ ಕವಿಯೂ ಕರ್ನಾಟಕದ ಅತ್ಯಂತ ಪ್ರಸಿದ್ಧ ಮಠಗಳಲ್ಲೊಂದಾದ ಚಿತ್ರದುರ್ಗದ ಮುರಿಗಾ ಮಠದ ಹೆಸರಾಂತ ಗುರುವೂ ಆದ ಇಮ್ಮಡಿ ಮುರಿಗಾ ಗುರುಸಿದ್ಧರು. ಕನ್ನಡದಲ್ಲಿ ಹೆಸರಾಂತ ಕವಿ ಹಾಗೂ ಮಠಪತಿ ಎರಡೂ ಆದವರಲ್ಲಿ ಷಡಕ್ಷರಿಯ ಹೆಸರು ತಕ್ಷಣ ನೆನಪಿಗೆ ಬರುತ್ತದೆ. ಷಡಕ್ಷರಿಯ ನಂತರ ನೆನಪಿನಾಳದಲ್ಲಿ ಉಳಿಯುವವರು ಇಮ್ಮಡಿ ಮುರಿಗಾ ಗುರುಸಿದ್ಧರು.

ಇಮ್ಮಡಿ ಮುರಿಗಾ ಗುರುಸಿದ್ಧರ ಪೂರ್ವನಾಮ ಗುರುಸಿದ್ಧ ಶಿವಯೋಗಿ. ಚಿನ್ಮೂಲಾದ್ರಿಯ ಬೃಹನ್ಮಠದ ಮುರಿಗಾ ಶಾಂತವೀರ ಸ್ವಾಮಿಗಳ ಕೃಪಾಕಟಾಕ್ಷಕ್ಕೆ ಪಾತ್ರರಾದ ಮೇಲೆ ಇಮ್ಮಡಿ ಮುರಿಗಾ ಗುರುಸಿದ್ಧ ದೇಶಿಕೇಂದ್ರರು ಎಂಬ ಹೆಸರು ಬಳಕೆಗೆ ಬಂದಿತು. ಇಮ್ಮಡಿ ಮುರಿಗಾ ಗುರುಸಿದ್ಧ ದೇಶಿಕೇಂದ್ರ, ಇಮ್ಮಡಿ ಗುರುಸಿದ್ಧ, ದ್ವಿತೀಯ ಮುರಿಗಾ ಗುರುಸಿದ್ಧ ದೇಶಿಕೇಂದ್ರ, ಲೀಲಾಖ್ಯದ ಮುರಿಗಾ ಶಿವಯೋಗಿ ಎಂದು ನಾನಾ ಹೆಸರುಗಳಿಂದ ಇವರನ್ನು ಕರೆಯಲಾಗಿದೆ.

ಧನಗೂರಿನಲ್ಲಿ ನಿರಂಜನ ಪೀಠಾಧೀಶನಾಗಿ ದಕ್ಷಿಣಾಮೂರ್ತಿಯಂತೆ ವೀರಶೈವೋಪದೇಶಕನಾಗಿದ್ದ ಉದ್ದಾನ ಯೋಗೀಶರ ವಂಶದಲ್ಲಿ ಹುಟ್ಟಿದವರು ತಾವೆಂದೂ, ಧನಗೂರಿನ ಶ್ರೀಮನ್ನಿರಂಜನ ಮಹಾಪೀಠಾಧೀಶರೂ ಆದ ಸೋಮಶೇಖರ ದೇಶಿಕರ ಪಾದಕಮಲವು ತನ್ನ ಹೃತ್ಸರೋವರದಲ್ಲಿ ನೆಲೆಸಲು ಅವರ ಉಪದೇಶದಿಂದ ತಾನು

ಭುವಿಯಲ್ಲಿ ಗುರುರೂಪ ತಾಳಿದೆನೆಂದೂ, ಕುಂಭಪಲ್ಲಿಯೆಂಬ ಸ್ಥಳದಲ್ಲಿ ಸೋಹಂ ಸೋಹಂ ಎಂಬ ಮಂತ್ರವನು ಹಂಸ ಹಂಸ ಎಂದು ಮಹಾಯೋಗಿ ಎನ್ನಿಸಿದ ಚಿದ್ಘನವೇಶ(ಬಸವಲಿಂಗ)ರಿಂದ ತಾನು ಮುರಿಗೆಯ ಶಾಂತವೀರ ದೇಶಿಕರಿಂದ ತಾನು ಪರರೂಪ ಪಡೆದೆನೆಂದೂ ಪುರಾಣ ಹಾಗೂ ಪ್ರಭುಲೀಲಾ ಕಾವ್ಯಗಳಲ್ಲಿ ಸಕ್ರಿಯ ವಿವರಗಳನ್ನು ಇಮ್ಮಡಿ ಗುರು ನೀಡಿರುವರು.

ಇಮ್ಮಡಿ ಮುರಿಗೆ ಗುರುಸಿದ್ಧರು ವಿರಕ್ತ ಪರಂಪರೆಗೆ ಸೇರಿದವರಾದುದ ತನ್ನ ಬಗೆಗೆ ತಂದೆ ತಾಯಿ, ಬಂಧು ಬಳಗಗಳ ಬಗೆಗೆ ತನ್ನ ಕೃತಿಗಳಲ್ಲಿ ವಿವರಗಳ ನೀಡಿಲ್ಲ. ಚಿನ್ಮೂಲಾದ್ರಿಯ ಬೃಹನ್ಮಠದ ಪೀಠವನ್ನೇರಿದ ಯತಿಶ್ರೇಷ್ಠರುಗಳ ಹೆಚ್ಚಿನ ವಿವರ ತಿಳಿದುಬರುವುದು ಮಹಾದೇವ ಕವಿಯ (ಕ್ರಿ.ಶ. 1870) 'ಮಹಾಲಿಂಗೇ ವಿಜಯ'ವೆಂಬ ಬೃಹದ್ಗ್ರಂಥದಿಂದ ಮಾತ್ರ.

ಚಿನ್ಮೂಲಾದ್ರಿಯ ಬೃಹನ್ಮಠದ ಪ್ರಥಮ ಪ್ರವರ್ತಕರು ಮುರಿಗೇಂದ್ರ ರಾಜೇಂದ್ರ ಇವರನ್ನು ಮುರಿಗ ಶಾಂತವೀರ ಸ್ವಾಮಿಗಳೆಂದೂ ಕರೆಯುವರು. ತೋಂಟದ ಸಿದ್ಧ ಪರಂಪರೆಗೆ ಸೇರಿದ ಗುರುಗಳೆಲ್ಲರೂ ಚರರೂಪಿಗಳಾಗಿದ್ದರು. ನಿತ್ಯ ಸಂಚಾರಿಗಳ ಇವರು ಒಂದೆಡೆ ಮಠ ಕಟ್ಟಿ ನಿಂತುದು ಮುರಿಗೇಂದ್ರ ರಾಜೇಂದ್ರರ ಕಾಲಕ್ಕೆ (ಕ್ರಿ. 1640–1703). ಮುರಿಗೇಂದ್ರ ರಾಜೇಂದ್ರ ಸ್ವಾಮಿಗಳ ಹೆಸರಿನೊಡನೆ ಸೇರಿದ 'ಮುರಿಗೆ' ಎಂಬ ವಿಶೇಷಣವು ಇವರ ನಂತರ ಬಂದ ಎಲ್ಲ ಜಗದ್ಗುರುಗಳ ಅವರವರ ಹೆಸರಿನೊಡನೆ ಸೇರ್ಪಡೆಯಾಗಿರುವುದು ಗಮನೀಯ ಸಂಗತಿಯಾಗಿ ಮುರಿಗೆ ಎಂಬ ಪದದ ವ್ಯುತ್ಪತ್ತಿ ಇಲ್ಲಿಯವರೆವಿಗೂ ಸರ್ವರಿಗೂ ಸಮ್ಮತವಾಗಿರುವ ಕಾಣೆ. ಮಹಾದೇವ ಕವಿಯ ಪ್ರಕಾರ ಮುರಿಗೆ ಯೆಂದರೆ ನುಲಿನುಲಿಯಾಗಿರುವ ಎಂದರ್ಥ. ರಾಜೇಂದ್ರ ಮಹಾಸ್ವಾಮಿಗಳ ಕೈಯಲ್ಲಿ ಮುರಿಗೆಯ ಮುದ್ಗರವಿದ್ದಿ ಅವರು ತಲೆಗೆ ಮುರಿಗೆ ಮುರಿಗೆಯಾದಂತಹ ವಸ್ತ್ರವನ್ನು ಸುತ್ತಿದರು; ಎದೆ ಮುರಿಗೆಯಾಗಿ ಒಂದು ಶಾಲನ್ನು ಹೊದ್ದಿದ್ದರು ಎನ್ನುವಲ್ಲಿ ಮೇಲಿನ ಅರ್ಥ ಸ್ಫುಟವಾಗಿ ಡಾ॥ ಎಲ್. ಬಸವರಾಜುರವರು "......... ಬಹುಶಃ ಈ ಮಾತು ಶಿವಪುತ್ರನಾ ಷಣ್ಮುಖನಿಗೆ ಪರ್ಯಾಯವಾಗಿ ತಮಿಳಿನಲ್ಲಿ ಅನ್ವಯಿಸುವ 'ಮುರುಗನ್' ಎಂಬುದರಿಂ ಬಂದಿರಬೇಕು......." ಮುರುಗನ್, ಮುರುಗ (ಷಣ್ಮುಖ, ಕುಮಾರಸ್ವಾಮಿ) ಲಾಂಛನದವರು ಮುರುಗಿಯವರು, ಮುರುಗೇಂದ್ರರು, ಮುರುಗೇಶ, ಮುರುಗಿಯವ ಇತ್ಯಾದಿಯಾಗಿರಬೇಕು" ಎಂದಿರುವರು. (ಶಿವಗಣ ಪ್ರಸಾದಿ ಮಹದೇವಯ್ಯ ದೇವರುಸೇರಿಸಿದ ಶೂನ್ಯಸಂಪಾದನೆ = ಎಲ್ ಬಸವರಜು, ಪುಟ ಸಂ 137)ಆದರೆ ಈ ಅಭಿಪ್ರಾಯ ಇನ್ನಷ್ಟು ವಿವರಣೆಯಿಂದ, ಆಧಾರಗಳಿಂದ ಪುಷ್ಟಿಗೊಳ್ಳಬೇಕಾಗಿದೆ.



ಮಹಾದೇವ ಕವಿಯ 'ಮಹಾಲಿಂಗೇಂದ್ರ ವಿಜಯ'ವು ಇಮ್ಮಡಿ ಮುರಿಗೆ ಗುರುಸಿದ್ಧ ದೇಶಿಕೇಂದ್ರರ ಬಗೆಗೆ ಈ ಕೆಳಗಿನಂತೆ ವಿವರ ನೀಡುತ್ತದೆ :

ಚಿನ್ಮೂಲಾದ್ರಿಯ ಬೃಹನ್ಮಠದ ಮುರಿಗೆ ಶಾಂತವೀರ ಸ್ವಾಮಿಗಳಿಂದ ಇಮ್ಮಡಿ ಮುರಿಗೆ ಗುರುಸಿದ್ಧ ದೇಶಿಕರೆಂಬ ಹೆಸರು ಪಡೆದು ಪಟ್ಟಾಧಿಕಾರವನ್ನು ಹೊಂದಿದ ಮೇಲೆ ನಾನಾ ದೇಶದ ಭಕ್ತರ ಮಾಹೇಶ್ವರರ ಸಂದೋಹಕ್ಕೆ ಕರುಣಾಗರವೃತ್ತ ಚಿತ್ರದುರ್ಗದ ಮಹಾಮಠದಲ್ಲಿ ಶೋಭಿಸಿರಲು ಹರಪನಹಳ್ಳಿಯಲ್ಲಿದ್ದ ಮುರಿಗೇಂದ್ರ ರಾಜೇಂದ್ರರ ಮತ್ತೋರ್ವ ಶಿಷ್ಯರಾದ ಚೀಲಾಳನೆಂಬವರು ಗುರುಸಿದ್ಧ ದೇಶಿಕರ ಅತುಲ ಸತ್ಕೀರ್ತಿಯನ್ನು ಕೇಳಿ ಸಹಿಸಲಾರದೆ ಮುಳಿಸುಗೊಂಡು "ಮುರಿಗೇಶ್ವರನು ಮುಖ್ಯ ಚರಮೂರ್ತಿಯಾದ ನನ್ನನ್ನು ಲಕ್ಷಿಸದೆ ಓರ್ವ ಮರಿಗೆ ಪಟ್ಟಗಟ್ಟಿ ಅಮಾಮಾನ ಮಾಡಿದರು" ಎಂದು ಬಗೆದು ನುಡಿದು ದುರ್ಗಕ್ಕೆ ಬಂದು ಗುರುಸಿದ್ಧ ಸ್ವಾಮಿಗಳಿಗೆ ವಿಮುಖರಾಗಿ ದುರ್ವರ್ತನೆಯಲ್ಲಿ ತೊಡಗಿದರು. ಚೀಲಾಳರ ದುರಹಂಕಾರವನ್ನು ಕಂಡು ಈ ಅನುಚಿತ ವರ್ತನೆ ಶಿಷ್ಯವರ್ಗಕ್ಕೆ ಸಲ್ಲದು ಎಂದು ಅವರಿಗೆ ಬಹಿಷ್ಕಾರ ಹಾಕಿ ಮಠದಿಂದ ಹೊರದಬ್ಬಿಸಿದರು. ಗುರುವಾಜ್ಞೆ ಮೀರಿದ ಚೀಲಾಳರನ್ನು ಚಿತ್ರದುರ್ಗದರಸು ಬಿಚ್ಚುಗತ್ತಿಯ ಬರಮನಾಯಕ (ಬ್ರಹ್ಮಣ್ಣನಾಯಕ) ದೇಶದಿಂದ ಹೊರಗಟ್ಟಿದನು. ಹರಪನಹಳ್ಳಿಗೆ ಬಂದ ಚೀಲಾಳರನ್ನು ಆ ಊರ ಒಡೆಯನು ಮನ್ನಿಸಿ ಮಠಮಾನ್ಯಗಳನ್ನು ಕಟ್ಟಿಸಿಕೊಟ್ಟನು. (ಮಹಲಿಂಗೇಂದ್ರ ವಿಜಯ,ಎಲ್ ಬಸವರಾಜು,ಪುಟ ಸಂ,307)

ಹಿಂದೆಯೇ ತಿಳಿಸಿದಂತೆ ಇಮ್ಮಡಿ ಮುರಿಗೆ ಗುರುಸಿದ್ಧರು ಪರಮ ವಿರಾಗಿ; ಕರ್ನಾಟಕದ ಪ್ರಸಿದ್ಧ ಗುರುಪೀಠದಧಿಪತಿ. ಹೀಗಾಗಿ ಇವರು ತನ್ನ ಪೂರ್ವಭವದ ವಿವರಗಳನ್ನೇನನ್ನೂ ತನ್ನ ಕೃತಿಗಳಲ್ಲಿ ಕೊಟ್ಟಿಲ್ಲ. ಮೈಸೂರು ಜಿಲ್ಲೆಗೆ ಸೇರಿದ ಧನಗೂರಿನವರಾದ ಇವರು ಚಿನ್ಮೂಲಾದ್ರಿಯ ಬೃಹನ್ಮಠದ ಪೀಠಾಧಿಕಾರಿಯಾದುದು ಹೇಗೆ ? ಈ ಪ್ರಶ್ನೆಗೆ ಉತ್ತರ ಸಿಗದು. ಊಹೆ ಮಾತ್ರ ಸಾಧ್ಯ

ಮುರಿಗಾ ಗುರುಸಿದ್ಧರು ಪ್ರಕಾಂಡ ಪಂಡಿತರು. ಉಭಯ ಭಾಷಾ ಕವಿತ್ವ ನಿಪುಣರು. ಸಕಲ ಜ್ಞಾನಿ. ವೀರಶೈವ ಧರ್ಮಗುರುಗಳು. ಜನಸಾಮಾನ್ಯರು ಪಂಡಿತರು–ಸರ್ವರೂ ಬಗೆ ಮೆಚ್ಚುವಂತೆ ಕವಿತ್ವ ರಚನೆ ಮಾಡಬಲ್ಲ ಪ್ರತಿಭಾ ಸಂಪನ್ನರು. ಇವರಿಂದ ರಚಿತವಾದ ಕೃತಿಗಳು ಕೆಳಗಿನಂತಿವೆ:

ಕನ್ನಡ

1. ಬಿಜ್ಜಮಹಾದೇವಿ ಚಾರಿತ್ರ–ಯಕ್ಷಗಾನ

2. ಹೋಳೀಪದ – ಜನಪದ ಸಾಹಿತ್ಯ

ಮೂಲ ಮತ್ತು ವ್ಯಾಖ್ಯಾನಗಳ ಛಾಯೆಯು ಕನ್ನಡ ಪಂಚಾಶಿಕಾಗಮದಲ್ಲಿ ಅ
ಕಡೆ ಕಾಣಬರುತ್ತದೆಂದು ಶ್ರೀ ಎನ್. ಅನಂತರಂಗಾಚಾರ್ ಅವರು ಅಭಿಪ್ರಾಯಪಡ

ಶಿವಲಿಂಗನಾಂಧ್ಯ

ಇದರಲ್ಲಿ ಇಪ್ಪತ್ತೈದು ಭಾಮಿನಿ ಹಾಗೂ ವಾರ್ಧಕ ಷಟ್ಪದಿಗಳಿವೆ. ಇವು ಶಿವನ ಸ್ತುತಿಗಳಿವೆ. ಈ ಕೃತಿಯನ್ನು ಒಲಿದು ಓದಿದವನಿಗೆ ಸಿಗುವ ಫಲವನ್ನು ಹೀಗೆ ವರ್ಣಿಸುವನು :

ಸಲೆ ನಿನ್ನ ಪಂಚವಿಂಶತಿ ನುತಿಯನಿದನಾವ
ನೊಲಿದೋದಿದಪನವಗೆ ಭವಬಂಧನವದಿಲ್ಲ
ಸುಲಭದಿಂದರ್ಥವನು ಮಾಡಿದಾತಗೆಯಂತೆ ಕೇಳ್ದನಿಗದೆ ತೆರನಲೆ
ಚಿಲಿಪಾಲು ಸಕ್ಕರೆಯ ಬೆರಕೆಯನು ಸವಿದನಿಗೆ
ನೆಲೆಯಾದಪುದೆಯಂಬಿಲದ ರುಚಿಯದರ ತೆರದೆ
ಚಲಿತಾನ್ಯ ನುತಿ ನಿನ್ನ ನುತಿಯೆ ನುತಿ ಯಿದಕೆ ಬೆಲೆಯಿಲ್ಲ
ಶಿವಲಿಂಗೇಶ್ವರಾ ॥ (ಪ. 25).

ಮಿಶ್ರಾರ್ಪಣ

ತನ್ನ ನಿಜವನು ತಿಳಿದು ಷಟ್‌ಸ್ಥಲ ಬ್ರಹ್ಮದಲ್ಲಿ ಏಕತ್ವವನ್ನು ಹೊಂದಿ ಜೀವ ಮುಕ್ತನಾಗಿ ಸಂಚರಿಸುವ ಕ್ರಮವನ್ನು ಕವಿಯು ಐದು ವಾರ್ಧಕ ಪದ್ಯಗಳಲ್ಲಿ ಹೇಳಿರುವ ಉದಾಹರಣೆಗೆ ಒಂದು ಪದ್ಯವನ್ನು ಪರಿಶೀಲಿಸಬಹುದು:

ತರದಿಂತೆ ಷೊಡಶೋತ್ತರಯುಗ ಶತಾರ್ಪಣದ
ಪರಿಯ ಪರಿವಿಡಿಯಿಂದೆ ಕಂಡನುಭವಿಪುದು ಚಿ
ತ್ಸರಧಿ ಮೇಲ್ವರಿಯಲುರು ಶಾಂತಿಚಂದ್ರಮನುದಿಸೆ
ಪರಮಶಿವಲಿಂಗೇಶನಾ ।
ವರ ಪಕ್ಷಿನಧಿ ಸಿಂದು ಬಾಣ ದ್ವಿಕಾಸ್ಯ ವಿ
ವಿಸ್ಫುರುದಂಗಯುತ ಚತುರ್ನಿಧಿ ನವೋಜ್ವಲಿತ
ಸರಳ ಲಿಂಗಾನ್ವಿತ ಸ್ಥಳಕುಳಂಗಳನೆಯ್ದೆ ಭಾವಿಪುದು
ಷಟ್ಸ್ಥಲದೊಳು ॥ (ಪ. 5)

ಶಿವಲಿಂಗ ಷಟ್ಪದಿ

ಇದರಲ್ಲಿ 105 ವಾರ್ಧಕಗಳಿವೆ. ಪ್ರತಿಯೊಂದು ಪದ್ಯವೂ 'ಶಿವಲಿಂಗೇಶಾ' ಎಂಬ ಅಂಕಿತದೊಡನೆ ಮುಕ್ತಾಯವಾಗುತ್ತದೆ. ಶಿವನ ಲೀಲಾ ವಿಲಾಸಗಳು, ಅಪ್ರತಿಮತ್ವ



ಭಕ್ತವತ್ಸಲತೆ, ಕರುಣಾಮೃತತ್ವ, ಸತ್ಕೃಪಾಸಿಂಧುತ್ವ-ಇತ್ಯಾದಿ ಸಂಕೀರ್ಣ ವಿಷಯಗಳು ಒಂದೊಂದು ಪದ್ಯಕ್ಕೆ ವಸ್ತುವಾಗಿದೆ. ವೇದ, ಆಗಮ, ಪುರಾಣಗಳ ಸಾಕ್ಷ್ಯಾಧಾರಗಳಿಂದ ಶಿವಾಧಿಕ್ಯದ ವಿವರಣೆ, ಶಿವನ ಲೀಲಾ ವಿಲಾಸಗಳ ಸ್ಮರಣೆ ಕವಿಗೆ ಆನಂದ ತಂದುಕೊಡುವವುಗಳಾಗಿವೆ.

ಇಮ್ಮಡಿ ಮುರಿಗಾ ಗುರುಸಿದ್ಧರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಳ್ಳೆಯ ಕವಿಯಾಗಿರುವರು. ಇವರು ಪ್ರಕಾಂಡ ಪಂಡಿತರು. 'ಪ್ರಭುಲೀಲಾ' ಹಾಗೂ 'ಹಾಲಾಸ್ಯ ಮಹಾತ್ಮೆ' ಕನ್ನಡ ಚಂಪೂ ಕೃತಿಯು ಇವರ ಅಪ್ರತಿಮ ಪ್ರತಿಭಾ ಸಂಪತ್ತಿಗೆ, ವೈದುಷ್ಯಕ್ಕೆ ನಿದರ್ಶನಗಳು. ಇವರ ಉಳಿದ ಕೃತಿಗಳು ವೀರಶೈವ ಧರ್ಮದ ತಾತ್ವಿಕ ಸಿದ್ಧಾಂತದ ಬಗೆಗಿನ ಆಳವಾದ ಇವರ ತಿಳುವಳಿಕೆಯನ್ನು ಶ್ರುತಪಡಿಸುತ್ತವೆ. 'ಷಟ್‌ಸ್ಥಲ ಜ್ಞಾನಿ'ಯಾಗಿದ್ದ ಇವರು ತನ್ನ ತಾತ್ವಿಕ ಜ್ಞಾನವನ್ನೆಲ್ಲ ತನ್ನ ಲಘು ಕೃತಿಗಳಲ್ಲಿ ಧಾರೆಯೆರೆದಿರುವರು. ನಮ್ಮಲ್ಲಿ ಧರ್ಮಗಳಿಗೆ ಸಂಬಂಧಿಸಿದ ತಾತ್ವಿಕ ಸಾಹಿತ್ಯ ಹೇರಳವಾಗಿದೆ. ಆದರೆ ಎಷ್ಟು ಮಂದಿ ತತ್ತ್ವಗಳು ನಮ್ಮ ಮನಂಬುಗುವಂತೆ ಹೇಳಿರುವರು? ಈ ಪ್ರಶ್ನೆಗೆ ಬೆರಳೆಣಿಕೆಯ ಮಂದಿ ನಿದರ್ಶನಕ್ಕೆ ಸಿಗಬಹುದು. ಇಮ್ಮಡಿ ಮುರಿಗಾ ಗುರುಸಿದ್ಧರು ಈ ಬೆರಳೆಣಿಕೆಯ ಕವಿಗಳಲ್ಲಿ ಮುಖ್ಯರೆಂಬುದು ಅತಿಶಯೋಕ್ತಿಯ ಮಾತಲ್ಲ.

## ಪರಾಮರ್ಶನ ಗ್ರಂಥಗಳು

* ಮಹಾಲಿಂಗೇಂದ್ರ ವಿಜಯ – ಸಂ.ಎಲ್. ಬಸವರಾಜು
* ಶಿವಗಣ ಪ್ರಸಾದಿ ಮಹದೇವಯ್ಯ ದೇವರುಸೇರಿಸಿದ ಶೂನ್ಯಸಂಪಾದನೆ – ಸಂ.ಎಲ್ ಬಸವರಜು
* ಇಮ್ಮಡಿ ಮುರಿಗಾ ಗುರುಸಿದ್ಧ ಸ್ವಾಮಿಗಳ ಕೃತಿಗಳು – ಸಂ.ಎಸ್ ವಿದ್ಯಾಶಂಕರ್
* ಮುರುಘಾ ಪರಂಪರೆಯ ಪ್ರಾಚೀನ ಸಾಹಿತ್ಯ – ಡಾ.ಪುಷ್ಪಾಬಸನಗೌಡರ
* ಮುರಿಗಾ ಶಾಂತವೀರ ಸ್ವಾಮಿಗಳ ಕೃತಿಗಳು – ಸಂ. ಎಸ್.ಶಿವಣ್ಣ
* ಚಿನ್ಮೂಲಾದ್ರಿ ಚೇತನ – ಸಂ.ಇ. ಶಿವಕುಮಾರ್

* * *